**ಓ.ಎಸ್. ನಂಬರ್ಃ 74/2019** **ಡಿ ಡಬ್ಲೂಃ 2**

<u>ದಿಃ 23-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು</u>.

**<u>ಪಾಟೀಸವಾಲು</u>** ಃ ವಾದಿ ಪರ ಶ್ರೀ ಎಸ್ ಆರ್ ಪಿ ವಕೀಲರಿಂದಃ

ನನ್ನ ಪ್ರಮಾಣ ಪತ್ರದಲ್ಲಿ ಪಾಲ ಮಾಡಿರುವ ಬಗ್ಗೆ ಬರೆಸಿದ್ದೇನೆ. ನನಗೆ ಸರಸ್ವತಿ, ನಂದಮ್ಮ ಹಾಗೂ ಅವರ ಅಣ್ಣ ತಮ್ಮದಿರ ನಡುವೆ ಪಾಲು ಆಗಿರುವ ಬಗ್ಗೆ ಗೊತ್ತಿಲ್ಲ ಎಂದರೆ ಸರಿ. ಸರಸ್ವತಿರವರ ಪಾಲಿಗೆ ಎಷ್ಟು ಎಕರೆ ಎಷ್ಟು ಗುಂಟೆ ಬಂದಿದೆ ನನಗೆ ಗೊತ್ತು. ಸರಸ್ವತಿಯವರ ತಂದೆ ಅವಳಿಗೆ ಎಷ್ಟು ಎಕರೆ ಎಷ್ಟು ಗುಂಟೆ ಕೋಟ್ಟಿದ್ದು ನನಗೆ ಗೊತ್ತಿಲ್ಲ ಆದರೆ ಸರಸ್ವತಿಯವರ ಹೆಸರಿನಲ್ಲಿ ಎಷ್ಟು ಎಕರೆ ಎಷ್ಟು ಗುಂಟೆ ಇತ್ತು ಹಾಗೂ ಅವರ ಮಗನಿಗೆ ಕೊಟ್ಟಿರುವ ಬಗ್ಗೆ ಗೊತ್ತಿರುತ್ತದೆ.

2 ನೇ ಪ್ರತಿವಾದಿ ಸರಸ್ವತಿ ರವರ ಮಗ ಅಲ್ಲ ಅವರ ಅಕ್ಕನ ಮಗ ಎಂದರೆ ಸರಿ. ಸರಸ್ವತಿಗೆ ಕಣ್ಣು ಕಾಣಿಸುತ್ತಿರಲಿಲ್ಲ ಎಂದರೆ ಸರಿ. ಅವರಗೆ ಮಕ್ಕಳು ಇರಲಿಲ್ಲ. ಸಾಕ್ಷಿಯು ಮುಂದುವರೆದು ಮದುವೆಯಾದ ಸ್ವಲ್ಪದಿನಗಳ ನಂತರ ಅವರ ಗಂಡ ತೀರಿಕೊಂಡಿದ್ದು ಆದ್ದರಿಂದ ಸರಸ್ವತಿ ಇವರು ಅಕ್ಕನ ಮಕ್ಕಳೇ ನನ್ನ ಮಕ್ಕಳು ಎಂದು ಅವರಿಗೆ ಭಾವನೆ ಇತ್ತು ಎಂದು ಸ್ವಇಚ್ಚೆಯಿಂದ ನುಡಿಯುತ್ತಾರೆ. ಈ ಬಗ್ಗೆ ನಾನು ಪ್ರಮಾಣ ಪತ್ರದಲ್ಲಿ ಬರೆದಿಲ್ಲ ಎಂದರೆ ಸರಿ.

ಸರಸ್ವತಿ ಇವರು 2 ನೇ ಪ್ರತಿವಾದಿಯವರಿಗೆ ಸರ್ವೆ ನಂ. 28 ರಲ್ಲಿ 3 ಎಕರೆ 29 ಗುಂಟೆ ಹಾಗೂ ಸರ್ವೆ ನಂ. 23 ರಲ್ಲಿ 2 ಎಕರೆ 13 ಗುಂಟೆ ಬರೆದುಕೊಟ್ಟಿರುತ್ತಾರೆ. ನಿ ಪಿ 2 ರಂತೆ ಸರ್ವೆ ನಂ. 28 ರಲ್ಲಿ ಸರಸ್ವತಿ ಇವಳ ಹೆಸರಿಗೆ 2 ಎಕರೆ 22 ಗುಂಟಾ ಇರುತ್ತದೆ ಎಂರದೆ ಸರಿ. 2 ನೇ ಪ್ರತಿವಾದಿಯವರು ಸರ್ವೆ ನಂ. 28 ರಲ್ಲಿ 2 ಎಕರೆ 22 ಗುಂಟೆ ಇದ್ದರೂ ಸಹ ವಾದಿಯವರಿಗೆ ಗೊತ್ತಿರದೇ ಇರುವ ಹಾಗೆ 3 ಎಕರೆ 39 ಗುಂಟೆ ಮಾಡಿಕೊಂಡಿದ್ದು ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯವರು ಗಡಿಕೇಶ್ವರದಲ್ಲಿ ವಾಸಿಸುತ್ತಿದ್ದಾರೆ ಎಂದರೆ ಸರಿ. ಈಗಲೂ ಸಹ ದಾವಾಸ್ವತ್ತಿನ ಕಬ್ಜಯಲ್ಲಿ ವಾದಿಯವರು ಇರುತ್ತಾರೆ ಎಂದರೆ ಸರಿ. ದಿ.08-02-2018 ರಂದು ಮೃತ್ಯು ಪತ್ರಮಾಡಬೇಕಾಗಿತ್ತು ಆದರೆ ಸಮಯದ ಕೊರತೆಯಿದ ಮೃತ್ಯು ಪತ್ರ ನೊಂದಣಿ ಮಾಡಲು ಆಗಲಿಲ್ಲ ಆದರೆ ಮೃತ್ಯು ಪತ್ರ ತಯಾರಿಸಲಾಗಿತ್ತು ಮತ್ತು ಮರುದಿನ ಅಂದರೆ ದಿ.09-02-2018 ರಂದು ಮೃತ್ಯು ಪತ್ರವನ್ನು ನೋಂದಣಿ ಮಾಡಲಾಗಿದೆ. ದಿ. 08-02-2018 ರಂದು ನಾನು ಸೇಡಂಗೆ ಬೆಳಗ್ಗೆ 10-30 ಗಂಟೆಗೆ ಬಂದಿದ್ದವು. ಆಗ ನಾನು, ನನ್ನ ಅಜ್ಜಿ ಹಾಗೂ ಚಂದ್ರಶೇಖರ್ ತಂದೆ ಬಸವರಾಜು ನನ್ನ ಜೊತೆಗೆ ಇದ್ದರು. ನಾವು ಮೊದಲು ನ್ಯಾಯಾಲಯಕ್ಕೆ ಬಂದಿದ್ದು ನಿ ಡಿ 1 ಮೃತ್ಯು ಪತ್ರ ತಯಾರು ಮಾಡಲು ಸಾಯಂಕಾಲ ಸುಮಾರು 03-00 ರಿಂದ 04-00 ಗಂಟೆ ಸಮಯ ಆಗಿತ್ತು. ಆಗ ನಿ ಡಿ 1 ಮೃತ್ಯು ಪತ್ರದಲ್ಲಿ ನನ್ನ ಹೆಸರು ಕೂಡ ಬೆರಳಚ್ಚು ಮಾಡಲಾಗಿತ್ತು ಎಂದರೆ ಸರಿ. ನಂತರ ನಾಮೆಲ್ಲರೂ ಉಪನೊಂದಣಾಧಿಕಾರಿ ಕಛೇರಿಯಲ್ಲಿ ಸ್ವಲ್ಪ ಸಮಯ ಕೂತಿದ್ದು ಆದರೆ ಯಾವುದೆ ಒಂದು ಕಾರಣಕ್ಕೂ ಆ ದಿನ ನೊಂದಣಿ ಆಗಿರುವುದಿಲ್ಲ. ನಂತರ ನಾವು ಮನೆಗೆ ಹೋಗಿ ಮರುದಿನ ಬಂದು ನೊಂದಣಿ ಮಾಡಿದೆವು. ದಿ. 08-02-2018 ರಂದು ಮೃತ್ಯು ಪತ್ರ ಮಾಡಲು ಯಾವುದೇ ಸಾಕ್ಷಿ ಇರದೇ ಇರುವುದರಿಂದ ನಾವು ಆ ದಿನ ನೊಂದಣಿ ಮಾಡಿರುವುದಿಲ್ಲ ಎಂದರೆ ಸರಿಯಿಲ್ಲ.

ನಿ ಡಿ 1 ಮೃತ್ಯು ಪತ್ರದಲ್ಲಿ ನನ್ನ ಹೆಸರು ಕೈಬರಹದಿಂದ ಬರೆಯಲಾಗಿದೆ ಎಂದರೆ ಸರಿ. ದಿ. 08-02-2018 ರಂದು ನಮಗೆ ಮೃತ್ಯು ಪತ್ರ ಮಾಡಲು ಯಾವುದೇ ಮಾಹಿತಿ ಇರಲಿಲ್ಲ ಅದಕ್ಕೆ ನಿ ಡಿ 1 ರಲ್ಲಿರುವ ಪೇಪರ್ ಖಾಲಿ ಬಿಟ್ಟಿದ್ದು ಹಾಗೂ ಮರುದಿನ ನಾವು ಬಂದಾಗ ಅದರಲ್ಲಿ ನಮ್ಮ ಹೆಸರು ಕೈಯಿಂದ ಬರೆದಿದ್ದಾರೆ ಎಂದರೆ ಸರಿ. ಆದರೆ ದಿ. 08-02-2018 ರಂದು ನಾನು ನ್ಯಾಯಾಲಯಕ್ಕೆ ಬಂದಿದ್ದು. ಸರಸ್ವತಿ ಇರಳು ಮೃತ್ಯು ಪತ್ರ ಮಾಡಲುಯಾವುದೇ ಮಾಹಿತಿ ಇರಲಿಲ್ಲ. ನಾನು ಹಾಗೂ 2 ನೇ ಪ್ರತಿವಾದಿಯವರು ಸೇರಿ ಸರಸ್ವತಿ ಇವಳಿಗೆ ಕಣ್ಣು ಕಾಣದೇ ಇರುವುದರಿಂದ ಸುಳ್ಳು ಮೃತ್ಯು ಪತ್ರ ಸೃಷ್ಟ ಮಡಿದ್ದೆವು ಎಂದರೆ ಸಾಕ್ಷಿಯು ಸರಸ್ವತಿ ಇವಳು ನನ್ನ ಮಗನಿಗೆ ಮೃತ್ಯು ಪತ್ರ ಮಾಡಿ ಕೊಡುತ್ತಿದ್ದೇನೆ ಬಾ ಅಂದಿದಕ್ಕೆ ನಾನು ಬಂದಿದ್ದೆ:ನೆ ಎಂದು ನುಡಿಯುತ್ತೇನೆ. ಈ ಬಗ್ಗೆ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಿಲ್ಲ. ದಾವಾ ಸ್ವತ್ತು ಸರಸ್ವತಿ ಇವಳ ತಂದೆಯ ಕಡೆಯಿಂದ ಬಂದಿರುವ ಆಸ್ತಿ ಇರುವುದರಿಂದ ಹಾಗೂ ಸರಸ್ವತಿ ಇವಳು ಯಾವುದೇ ಮಕ್ಕಳು ಇರದೆ ಮೃತ ಪಟ್ಟಿ ರುವುದಂರಿದ ದಾವಾ ಸ್ವಾತ್ತು ಮರಳಿ ಸರಸ್ವತಿ ರವರ ತಂದೆಯ ವಾರಸುದಾರರಿಗೆ ಹೋಗುತ್ತದೆ ಎಂದರೆ ಸಾಕ್ಷಿಯು ಸರಸ್ವತಿಯವರು ಯಾರಿಗೆ ಬೇಕಾದರೆ ಮಾಡಬಹುದು ಎಂದು ನಡಿಯುತ್ತಾರೆ. ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ.

ಮರುವಿಚಾರಣೆ: ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**